

بسم اللهِ الرّحمٰن الرّحيم

# ರಮಝಾನ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **16–04–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.
اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.
اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಸೂರಃ ಅಲ್‌ಬಖರದ 184ರಿಂದ 187ರ ವರೆಗಿನ ವಚನಗಳನ್ನು ಪಠಿಸಿ ಅವುಗಳ ಅರ್ಥವನ್ನು ವಿವರಿಸಿ ಬಳಿಕ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಈ ವರ್ಷವೂ ನಮಗೆ ರಮಝಾನ್ ತಿಂಗಳಿಂದ ಪ್ರಯೋಜನ ಪಡೆಯಲು ಸಂದರ್ಭ ಸಿಗುತ್ತಿದೆ. ರಮಾಝಾನ್ ತಿಂಗಳನ್ನು ಪಡೆಯುವುದು, ಸಹರಿ – ಇಫ್ತಾರಿ ಮಾಡುವುದು ಮಾತ್ರ ಸಾಕಾಗಲಿಕ್ಕಿಲ್ಲ. ಬದಲಾಗಿ, ಉಪವಾಸದೊಂದಿಗೆ ನಮ್ಮೊಳಗೆ ಪರಿಶುದ್ಧವಾದ ಒಂದು ಬದಲಾವಣೆ ಉಂಟುಮಾಡಲು ಆಜ್ಞಾಪಿಸಲಾಗಿದೆ. ಉಪವಾಸಗಳಿಗೆ ಸಂಬಂಧಿಸಿ ಅಲ್ಲಾಹನು ನಮಗೆ ಕೆಲವು ಆದೇಶಗಳನ್ನು ನೀಡಿರುವನು. ಅವುಗಳ ಪ್ರಕಾರ ನಡೆಯುವುದರಿಂದ ತನ್ನ ಸಾಮೀಪ್ಯವನ್ನು ನೀಡುವುದಾಗಿಯೂ ಪ್ರಾರ್ಥನೆಗಳನ್ನು ಅಂಗೀಕರಿಸುವುದಾಗಿಯೂ ಅಲ್ಲಾಹನು ಸುವಾರ್ತೆ ನೀಡಿರುವನು. ನಾನು ಓದಿದ ವಚನಗಳಲ್ಲಿ ಉಪವಾಸ ಇರಿಸುವುದು ಕಡ್ಡಾಯವೆಂಬುದರ ಕಡೆಗೆ ನಮ್ಮ ಗಮನವನ್ನು ಅಲ್ಲಾಹನು ಸೆಳೆದಿದ್ದಾನೆ. ರೋಗ ಅಥವಾ ಅನುಮತನೀಯವಾದ ಏನಾದರೂ ಕಾರಣದಿಂದ ಉಪವಾಸಗಳನ್ನು ಇರಿಸದೇ ಇದ್ದರೆ ಅವುಗಳನ್ನು ಅನಂತರ ಬೇರೆ ದಿನಗಳಲ್ಲಿ ಪೂರ್ತಿಗೊಳಿಸ ಬೇಕೆಂದೂ ಆರ್ಥಿಕವಾಗಿ ಉತ್ತಮ ನೆಲೆಯಲ್ಲಿ ಇರುವವರು ಉಪವಾಸದೊಂದಿಗೆ ಫಿದ್‌ಯ ನೀಡುವುದು ಉತ್ತಮವೇ ಆಗಿದೆ ಎಂದೂ ಹೇಳಿದ್ದಾನೆ.

ಪವಿತ್ರ ಖುರ್‌ಆನಿನ ಪ್ರಾಮುಖ್ಯತೆ ಮತ್ತು ಅದರ ಅವತೀರ್ಣದ ಬಗ್ಗೆ ಸಹ ಹೇಳಿಕೊಂಡು, ಅದರ ಪ್ರಕಾರ ನಡೆಯುವುದರಿಂದ ಅದು ನಮ್ಮ ಸನ್ಮಾರ್ಗಕ್ಕೆ ಮತ್ತು ವಿಶ್ವಾಸದ ದೃಢತೆಗೆ ಕಾರಣವಾಗುವುದು ಎಂದು ಅಲ್ಲಾಹನು ಹೇಳಿದ್ದಾನೆ. ಅದಲ್ಲದೆ, ಅವನು ದಾಸರ ಬಹಳ ಸಮೀಪದಲ್ಲಿರುತ್ತಾನೆ ಮತ್ತು ದಾಸರ ಪ್ರಾರ್ಥನೆಗಳನ್ನು ಆಲಿಸಿ ಅದನ್ನು ಅಂಗೀಕರಿಸುತ್ತಾನೆ ಎಂಬ ಒಂದು ಸುವಾರ್ತೆಯನ್ನು ಸಹ ಅಲ್ಲಾಹನು ಪ್ರವಾದಿಗೆ ನೀಡಿದ್ದಾನೆ. ಪ್ರಾರ್ಥನೆಗಳ ಸ್ವೀಕಾರಕ್ಕಾಗಿ ಕೆಲವು ಶರತ್ತುಗಳಿವೆ, ನಾವು ಆ ನಿಬಂಧನೆಗಳ ಪ್ರಕಾರ ನಮ್ಮ ದುಆಗಳನ್ನು ಮನೋಹರವನ್ನಾಗಿ ಮಾಡುವಾಗ ಅಲ್ಲಾಹನು ಸಹ ಅವನ ಸಾಮೀಪ್ಯವನ್ನು ನಮಗೆ ನೀಡುವನು ಮತ್ತು ನಮ್ಮ ಪ್ರಾರ್ಥನೆಗಳನ್ನು ಅಂಗೀಕರಿಸುವನು. ಈಗ ನಾನು ದುಆಗಳ ಪ್ರಾಮುಖ್ಯತೆ, ಪ್ರಾರ್ಥನೆ ಸ್ವೀಕಾರದ ಶರತ್ತುಗಳು ಮತ್ತು ಅದರ ತತ್ವದ ಕುರಿತು ಹಝ್ರತ್ ಮಸೀಹ್ ಮೌಊದ್[ಅ]ರ ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದಿರಿಸುವೆನು. ದುಆ ಸ್ವೀಕಾರದ ಕುರಿತು ನೆನಪಿಡಬೇಕಾದ ಸಂಗತಿಯೇನೆಂದರೆ, ಮೊದಲ ಹೆಜ್ಜೆಯಿಡುವಿಕೆ ದಾಸನ ಕಡೆಯಿಂದ ಆಗಿರಬೇಕು. ಅದು ಅದರ ಎಲ್ಲೆಯನ್ನು ತಲುಪುವಾಗಲೇ ಅಲ್ಲಾಹನ ಕರುಣೆ ಮತ್ತು ಕೃಪೆ ಶಕ್ತವಾಗಿ ಹೊರಹೊಮ್ಮುತ್ತದೆ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ದುಆ ಎಂಬುದು ಇಸ್ಲಾಮಿನ ವಿಶಿಷ್ಟ ಹೆಮ್ಮೆಯ ಸಂಗತಿಯಾಗಿದೆ. ಮುಸ್ಲಿಮರಿಗೆ ಇದರ ಬಗ್ಗೆ ಬಹಳ ಅಭಿಮಾನವಿದೆ. ಪ್ರಾರ್ಥನೆ ಎಂಬುದು ಬಾಯಿಯಿಂದ ಹೊರಡುವ ಬರೀ ಮಾತಿನ ಹೆಸರಲ್ಲ. ಬದಲಾಗಿ, ಅದು ಹೃದಯವನ್ನು ಅಲ್ಲಾಹನ ಭಯದಿಂದ ತುಂಬಿಸುವ, ಆತ್ಮವನ್ನು ದೇವಸನ್ನಿಧಿಯಲ್ಲಿ ಸಮರ್ಪಿಸುವ ಸಂಗತಿಯಾಗಿದೆ. ಈ ಸ್ಥಿತಿಯನ್ನು ಒಂದು ಅರ್ಥದಲ್ಲಿ ಮರಣವೆಂದು ಹೇಳಬಹುದು.

ದುಆ ಸ್ವೀಕಾರದ ವಿಷಯವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಸತ್ಯದಲ್ಲಿ ದುಆ ಸ್ವೀಕಾರದ ವಿಷಯ ದುಆದ ಒಂದು ಶಾಖೆಯಾಗಿದೆ. ದುಆದ ನಿಜಸ್ಥಿತಿಯೇನೆಂದರೆ, ಅದು ಒಬ್ಬ ಸಾತ್ವಿಕನಾದ ದಾಸ ಮತ್ತು ಅವನ ಪರಿಪಾಲಕನಾದ ಅಲ್ಲಾಹನ ನಡುವೆಯಿರುವ ಪರಸ್ಪರ ಆಕರ್ಷಣೆಯ ಒಂದು ಸಂಬಂಧವಾಗಿದೆ. ದಾಸನು ಯಾವುದಾದರೂ ಕಠಿಣವಾದ ಕಷ್ಟತೆಗೆ ಈಡಾಗಿ ಅಲ್ಲಾಹನ ಕಡೆಗೆ ಪರಿಪೂರ್ಣವಾದ ದೃಢವಿಶ್ವಾಸ, ಸಮಗ್ರವಾದ ಪ್ರೇಮ ಮತ್ತು ನಿಷ್ಠೆಯಿಂದ ಬಾಗಿಕೊಂಡು ಅಜಾಗರೂಕತೆ ಮತ್ತು ಅಸಡ್ಡೆಯ ಪರದೆಗಳನ್ನು ಸೀಳಿಕೊಂಡು ಸಮರ್ಪಣೆಯ ಮೈದಾನದಲ್ಲಿ ಮುಂದಕ್ಕೆ ಸಾಗುವಾಗ ಹಾಗೂ ದೇವನ ದರ್ಬಾರಿನಲ್ಲಿ ಅವನ ಆತ್ಮ ಅಲ್ಲಾಹನ ಸನ್ನಿಧಿಯಲ್ಲಿ ತಲೆಯಿರಿಸುವಾಗ ಅವನೊಳಗೆ ಇರುವ ಆಕರ್ಷಣೆಯ ಶಕ್ತಿಯು ಅಲ್ಲಾಹನ ವರದಾನಗಳನ್ನು ತನ್ನೆಡೆಗೆ ಸೆಳೆಯುತ್ತದೆ.

ಪ್ರವಾದಿಗಳಿಂದ ಪ್ರಕಟವಾದ ಸಾವಿರಾರು ಅದ್ಭುತ ದೃಷ್ಟಾಂತಗಳು ಅಥವಾ ಅಲ್ಲಾಹನ ಗೌರವಾನ್ವಿತ ವರಿಷ್ಠ ದಾಸರು ಇಂದಿನ ತನಕ ತೋರಿಸಿದ ವಿಸ್ಮಯಕರವಾದ ಸಂಗತಿಗಳ ಮತ್ತು ಮಹಿಮೆಗಳ ಮೂಲ ಮತ್ತು ಉಗಮ ಇದೇ ದುಆ ಆಗಿದೆ. ಹೆಚ್ಚಾಗಿ ದುಆಗಳ ಪ್ರಭಾವದಿಂದಲೇ ಸರ್ವಶಕ್ತನಾದ ಅಲ್ಲಾಹನ ವತಿಯಿಂದ ವಿವಿಧ ರೀತಿಯ ಅಸಾಮಾನ್ಯವಾದ ಮತ್ತು ಮನುಷ್ಯನಿಗೆ ಅತೀತವಾದ ಘಟನೆಗಳು ಘಟಿಸುತ್ತವೆ.

ನಮ್ಮ ಮಾರ್ಗದಲ್ಲಿ ಪರಿಶ್ರಮಪಡುವವನಿಗೆ ನಾವು ನಮ್ಮ ಮಾರ್ಗವನ್ನು ತೋರಿಸುವೆವು ಎಂದು ಅಲ್ಲಾಹನು ಹೇಳುತ್ತಾನೆ. ಪರಿಶ್ರಮಪಡಬೇಕಾದ ಹೊಣೆಗಾರಿಕೆ ದಾಸನ ಮೇಲೆ ಇರಿಸಲಾಗಿದೆ. ಅನಂತರ ನಮ್ಮನ್ನು ನೇರವಾದ ಮಾರ್ಗದ ಕಡೆಗೆ ನಡೆಸು ಎಂಬ ಪ್ರಾರ್ಥನೆಯನ್ನು ಕಲಿಸಿದನು. ಆದ್ದರಿಂದ ಇದನ್ನು

ಮುಂದಿರಿಸಿಕೊಂಡು ಮನುಷ್ಯನು ನಮಾಝಿನಲ್ಲಿ ದೃಢನಿರ್ಧಾರದೊಂದಿಗೆ ತೀವ್ರತೆಯಿಂದ ದುಆ ಮಾಡಬೇಕು. ಪರಲೋಕವನ್ನು ನೋಡಲು ಇಹಲೋಕದಿಂದಲೇ ನಾವು ಕಣ್ಣುಗಳನ್ನು ಕೊಂಡುಹೋಗಬೇಕಾಗಿದೆ.

ಒಟ್ಟಿನಲ್ಲಿ, ಈ ದಿನಗಳಲ್ಲಿ **ಇಹ್‌ದಿನಸ್ಸಿರಾತಲ್ ಮುಸ್ತಖೀಂ** ಎಂದರೆ, ನಮ್ಮನ್ನು ಸನ್ಮಾರ್ಗದಲ್ಲಿ ನಡೆಸು ಎಂಬ ಪ್ರಾರ್ಥನೆಯನ್ನು ಬಹಳವಾಗಿ ಮಾಡಬೇಕು. ಅಲ್ಲಾಹನು ನಮ್ಮನ್ನು ನೇರವಾದ ಮಾರ್ಗದಲ್ಲಿ ನಡೆಸಲಿ. ಹೃದಯಗಳನ್ನು ಪರಿಶುದ್ಧಗೊಳಿಸಿಕೊಂಡು ನೈಜವಾದ ಆರಾಧಕರಾದ ದಾಸರನ್ನಾಗಿ ಮಾಡಲಿ. ಅಲ್ಲಾಹನ ಇತರ ದಾಸರ ಹಕ್ಕುಗಳನ್ನು ಈಡೇರಿಸುವವರನ್ನಾಗಿ ಮಾಡಲಿ. ಇಂದು ಉಗ್ರವಾದಿಗಳು ಮಾಡುವಂತೆ ಮಾಡುವವರಾಗದಿರಲಿ. ಅವರು ಅಲ್ಲಾಹನ ಮತ್ತು ಪ್ರವಾದಿಯ ಹೆಸರಲ್ಲಿ ದೌರ್ಜನ್ಯಗಳನ್ನು ಮಾಡುತ್ತಾ ಹೋಗುತ್ತಿದ್ದಾರೆ.

ಕೆಲವರು ಹೇಳುತ್ತಾರೆ, ನಾವು ಎಷ್ಟು ದೊಡ್ಡ ಪಾಪಿಗಳಾಗಿದ್ದೇವೆ ಎಂದರೆ ಅಲ್ಲಾಹನು ನಮ್ಮನ್ನು ಕ್ಷಮಿಸಲಿಕ್ಕಿಲ್ಲ ಎಂದು. ಸತ್ಯದಲ್ಲಿ ಶೈತಾನನು ಇಂತಹ ಸಂಶಯಗಳನ್ನು ಹುಟ್ಟಿಸುತ್ತಾನೆ ಮತ್ತು ಕಿವಿಗಳಲ್ಲಿ ಈ ರೀತಿಯಲ್ಲಿ ಪಿಸುಗುಟ್ಟುತ್ತಾನೆ. ಶೈತಾನನ ಈ ದಾಳಿಯಿಂದ ರಕ್ಷಣೆ ಪಡೆಯುವ ವಿಧಾನವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಪಾಪಿಯು ತಾನು ಮಾಡಿರುವ ಪಾಪಗಳ ಆಧಿಕ್ಯದ ಬಗ್ಗೆ ಆಲೋಚಿಸಿಕೊಂಡು ಪ್ರಾರ್ಥನೆ ಮಾಡುವುದರಿಂದ ಬಿಟ್ಟುನಿಲ್ಲಬಾರದು. ಯಾರು ಪಾಪಗಳಲ್ಲಿ ಮುಳುಗಿಕೊಂಡು ದುಆ ಸ್ವೀಕಾರದ ಬಗ್ಗೆ ನಿರಾಶೆಹೊಂದುತ್ತಾನೋ ಮತ್ತು ಪಶ್ಚಾತ್ತಾಪ ಮಾಡುವುದಿಲ್ಲವೋ ಅವರು ಕೊನೆಗೆ ಪ್ರವಾದಿಗಳನ್ನು ಮತ್ತು ಅವರ ಪ್ರಭಾವಗಳನ್ನು ಕೂಡ ನಿಷೇಧಿಸುತ್ತಾನೆ.

ತನಗೆ ಲಭಿಸಿದ ಇಲ್‌ಹಾಂ ಆದ **ಉಜೀಬು ಕುಲ್ಲ ದುಆಇಕ** ಎಂದರೆ, ನಿನ್ನ ಎಲ್ಲ ದುಆಗಳನ್ನು ಅಂಗೀಕರಿಸಲಾಗುವುದು ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಯಾವ ದುಆಗಳನ್ನು ಅಂಗೀಕರಿಸದೇ ಇರುವುದರಿಂದ ಹಾನಿಯುಂಟಾಗುವುದೋ ಅವುಗಳನ್ನು ಮಾತ್ರ ಇಲ್ಲಿ **"ಎಲ್ಲ ದುಆ"** ಎಂಬುದರಿಂದ ಉದ್ದೇಶಿಸಲಾಗಿದೆ. ಅಲ್ಲಾಹನು ಅಭಿವೃದ್ಧಿ ಮತ್ತು ಸುಧಾರಣೆಯನ್ನು ಇಚ್ಛಿಸುವಾಗ ಕೆಲವು ದುಆಗಳನ್ನು ರದ್ದುಗೊಳಿಸುವುದನ್ನೇ ದುಆ ಸ್ವೀಕಾರವಾಗಿ ಪರಿಗಣಿಸಲಾಗುವುದು. ಇದರ ರಹಸ್ಯವೇನೆಂದರೆ, ದುಆ ಮಾಡುವವನ ಒಳಿತು ಅಂತಹ ದುಆಗಳನ್ನು ರದ್ದುಗೊಳಿಸುವುದರಲ್ಲಿ ಇರುತ್ತದೆ. ನಮ್ಮ ಭಯವನ್ನು ನೋಡಿಕೊಂಡು ಅಥವಾ ನಮ್ಮ ಅಭಿಲಾಷೆ ಪ್ರಕಾರ ಅವುಗಳಿಗೆ ವಿಧೇಯನಾಗಿಕೊಂಡು ಅಲ್ಲಾಹನು ನಮ್ಮ ದುಆಗಳನ್ನು ಸ್ವೀಕರಿಸಬೇಕೆಂದೇನಿಲ್ಲ. ದುಆದಲ್ಲಿ ಹಾನಿಕಾರಕವಾದ ಏನಾದರೂ ಅಂಶವಿದ್ದರೆ ನನ್ನ ಆ ದುಆ ಖಂಡಿತವಾಗಿಯೂ ಸ್ವೀಕರಿಸಲ್ಪಟ್ಟಿಲ್ಲ ಎಂಬುದಕ್ಕೆ ನಾನು ಅನುಭವಿಯಾಗಿದ್ದೇನೆ.

(ಹುಝೂರ್ ಹೇಳುತ್ತಾರೆ:) ದುಆ ಮಾಡುತ್ತೇವೆ ಮತ್ತು ಒತ್ತಾಯಪೂರ್ವಕವಾಗಿ ಒಂದು ಕೆಲಸವನ್ನು ಮಾಡಲು ಪ್ರಯತ್ನ ಕೂಡ ಮಾಡುತ್ತೇವೆ, ಆದರೂ ಅದರ ಪರಿಣಾಮ ಉತ್ತಮವಿರಲಿಲ್ಲವೆಂದು ಅಲ್ಲಾಹನ ಬಗ್ಗೆ ದೂರು ಹೇಳುತ್ತಾ ದಿನನಿತ್ಯದ ಅಂಚೆಯಲ್ಲಿ ಕೆಲವು ಜನರ ಪತ್ರಗಳು ನನಗೆ ಬರುತ್ತವೆ. ಮೊದಲ ಸಂಗತಿಯೇನೆಂದರೆ, ದುಆವನ್ನು ಅದರ ಉತ್ತುಂಗಕ್ಕೆ ತಲುಪಿಸಲಾಗಿದೆಯೋ ಇಲ್ಲವೋ ಎಂದು ನೋಡಬೇಕಾಗಿದೆ. ಅತಿಯಾಗಿ ದುಆ ಮಾಡಿಕೊಂಡು ಕೂಡ ಅದರ ಪರಿಣಾಮಗಳು ಉಂಟಾಗಿಲ್ಲವೆಂದಾದರೆ, ಅದೇ ಅಲ್ಲಾಹನ ಯೋಜನೆಯಾಗಿರುತ್ತದೆ ಮತ್ತು ಅದರಲ್ಲೇ ಮನುಷ್ಯನ ಒಳಿತಿರುತ್ತದೆ ಎಂದು ತಿಳಿಯಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಲ್ಲಾಹನು ತನ್ನ ದಾಸರ ಪ್ರಾರ್ಥನೆಗಳನ್ನು ಕೇಳುತ್ತಾನೆ ಮತ್ತು ಅವುಗಳನ್ನು ಸ್ವೀಕರಿಸುತ್ತಾನೆ ಎಂಬುದು ಒಂದು ಸತ್ಯ ಮತ್ತು ನಿಶ್ಚಿತವಾದ ಸಂಗತಿಯಾಗಿದೆ. ಆದರೆ ಸಕಲ ದುಆಗಳನ್ನು ಸ್ವೀಕರಿಸುವುದಿಲ್ಲ. ಏಕೆಂದರೆ, ಆತ್ಮದ ಆವೇಶದ ಕಾರಣದಿಂದ ಮನುಷ್ಯನು ಪರಿಣಾಮ ಮತ್ತು ಅಂತ್ಯಫಲವನ್ನು ನೋಡದೇ ದುಆ ಮಾಡುತ್ತಾನೆ. ಆದರೆ ನೈಜವಾದ ಒಳಿತನ್ನು ಬಯಸುವ ಮತ್ತು ಅಂತ್ಯಫಲದ ಬಗ್ಗೆ ಗೊತ್ತಿರುವ ಅಲ್ಲಾಹನು ಈ ಹಾನಿಗಳನ್ನು ಮತ್ತು ದುಷ್ಪರಿಣಾಮಗಳನ್ನು ದೃಷ್ಟಿಯಲ್ಲಿರಿಸಿಕೊಂಡು ದುಆವನ್ನು ರದ್ದು ಕೂಡ ಮಾಡುತ್ತಾನೆ. ಹೀಗೆ ಸ್ವೀಕರಿಸಲ್ಪಡದ ದುಆ ಅವನಿಗೆ ಸಂಬಂಧಿಸಿ ದುಆ ಸ್ವೀಕಾರವಾಗಿರುತ್ತದೆ.

ಪ್ರಾರ್ಥನೆಯ ಸ್ವೀಕಾರದ ನಿಬಂಧನೆಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಬೇರೆಯವರಿಂದ ದುಆ ಮಾಡಿಸುವವನು ಸ್ವಯಂ ಅಲ್ಲಾಹನ ಭಯ ಮತ್ತು ದೇವಭಕ್ತಿಯನ್ನು ಮುಂದಿರಿಸಬೇಕೆಂಬುದು ಆವಶ್ಯವಾದ ಸಂಗತಿಯಾಗಿದೆ. ಅಲ್ಲಾಹನ ಗುಣದೊಂದಿಗೆ ಹೊಂದಾಣಿಕೆ ಇರಿಸುವುದು ಮತ್ತು ದೇವಾರಾಧನೆಯನ್ನು ಅಭ್ಯಾಸ ಮಾಡಿಕೊಳ್ಳಬೇಕಾಗಿದೆ. ಭಯಭಕ್ತಿ ಮತ್ತು ಸತ್ಯಸಂಧತೆಯಿಂದ ಅಲ್ಲಾಹನನ್ನು ಸಂತೋಷಗೊಳಿಸಬೇಕು. ಇಂತಹ ಸ್ಥಿತಿಯಲ್ಲಿ ದುಆಗಾಗಿ ಸ್ವೀಕಾರದ ಬಾಗಿಲು ತೆರೆಯಲ್ಪಡುತ್ತದೆ. ಮನುಷ್ಯನು ವಿಶ್ವಾಸಪರವಾಗಿ ಸುದೃಢನಾಗಿರಬೇಕು ಮತ್ತು ಸತ್ಕರ್ಮಗಳನ್ನು ಮಾಡುವವನಾಗಿರಬೇಕು ಎಂಬುದು ಸಹ ದುಆದ ಸ್ವೀಕಾರಕ್ಕೆ ಆವಶ್ಯವಾದ ಸಂಗತಿಯಾಗಿದೆ. ಏನೂ ಮಾಡದೇ ದುಆ ಮಾಡುವವನು, ಸತ್ಯದಲ್ಲಿ ದುಆ ಮಾಡುತ್ತಿಲ್ಲ, ಬದಲಾಗಿ ಅಲ್ಲಾಹನನ್ನು ಪರೀಕ್ಷಿಸುತ್ತಾನೆ. ದುಆ ಮಾಡಿರುವಾಗ ಬೇರೆ ಮಾರ್ಗಗಳನ್ನು ಅವಲಂಬಿಸುವ ಆವಶ್ಯಕತೆ ಏನೆಂದು ಕೆಲವರು ಕೇಳುತ್ತಾರೆ. ಈ ಅರಿವಿಲ್ಲದವರು ಯೋಚಿಸಬೇಕು, ದುಆ ಸ್ವತಃ ಒಂದು ರಹಸ್ಯವಾದ ಸಾಧನ ಸಾಮಗ್ರಿಯಾಗಿದೆ. ಅದು ಇತರ ಮಾರ್ಗಗಳನ್ನು ಉಂಟುಮಾಡುತ್ತದೆ. **ಇಯ್ಯಾಕ ನಸ್ತಈನ್** ಎಂಬುದಕ್ಕೆ ಮುಂಚಿತವಾಗಿ **ಇಯ್ಯಾಕ ನಅ್‌ಬುದು** ಎಂಬ ಪ್ರಾರ್ಥನೆಯು ಈ ಸಂಗತಿಯನ್ನು ವಿಶೇಷವಾಗಿ ಸ್ಪಷ್ಟಪಡಿಸುತ್ತದೆ. ಅಲ್ಲಾಹನ ಗುಣನಾಮಗಳಲ್ಲಿ **ಅಝೀಝ್** ಮತ್ತು **ಹಕೀಂ** ಎಂಬ ಎರಡು ನಾಮಗಳೂ ಇವೆ. **ಅಝೀಝ್** ಎಂದರೆ, ಎಲ್ಲ ಕಾರ್ಯಗಳನ್ನು ಮಾಡುವವನು. **ಹಕೀಂ** ಎಂದರೆ, ಪ್ರತಿಯೊಂದು ಕೆಲಸವನ್ನು ಏನಾದರೂ ಯುಕ್ತಿಯ ಆಧಾರದಲ್ಲಿ, ಸಂದರ್ಭಾನುಸಾರ ಸರಿಯಾದ ಮತ್ತು ಸಮಂಜಸವಾದ ರೀತಿಯಲ್ಲಿ ಮಾಡುವವನು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ತಖ್ವವನ್ನು ಶರೀಅತಿನ ಸಾರಾಂಶ ಮತ್ತು ಧರ್ಮಶಾಸನದ ತಿರುಳು ಎಂದು ಹೇಳಬಹುದು. ಒಬ್ಬನು ಸತ್ಯಾನ್ವೇಷಿಯಾಗಿಕೊಂಡು ಪ್ರಾರಂಭ ಘಟ್ಟಗಳನ್ನು ಮತ್ತು ಅದರ ಮಜಲುಗಳನ್ನು ಸ್ಥೈರ್ಯದಿಂದ ಮತ್ತು ನಿಷ್ಠೆಯಿಂದ ದಾಟಿದರೆ, ಅವನು ಈ ನೇರಮಾರ್ಗ ಮತ್ತು ಸತ್ಯಾನ್ವೇಷಣೆಯ ಕಾರಣದಿಂದ ಉನ್ನತ ಪದವಿಗಳನ್ನು ಗಳಿಸುತ್ತಾನೆ. ದೇವಭಕ್ತರ ದುಆಗಳನ್ನು ಅವನು ಸ್ವೀಕರಿಸುತ್ತಾನೆ ಎಂದು ಅಲ್ಲಾಹನು ಹೇಳುತ್ತಾನೆ.

ಕೃಪೆಯ ವಿಧಗಳ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಕೃಪೆಯ ಎರಡು ವಿಧಗಳಿವೆ. ಒಂದು **ರಹ್ಮಾನಿಯ್ಯತ್** ಮತ್ತೊಂದು **ರಹೀಮಿಯ್ಯತ್**. **ರಹ್ಮಾನಿಯ್ಯತ್** ಎಂಬುದು ನಮ್ಮ ಅಸ್ತಿತ್ವ ಮತ್ತು ಹುಟ್ಟಿಗೆ ಮುಂಚಿತವಾಗಿ ಆಕಾಶ ಮತ್ತು ಭೂಮಿಯ ಹಾಗೂ ಭೂಮ್ಯಾಕಾಶಗಳಲ್ಲಿರುವ ವಸ್ತುಗಳ ರೂಪದಲ್ಲಿ ಶುರುವಾದ ವರದಾನಗಳಾಗಿವೆ. ಎರಡನೆಯದು **ರಹೀಮಿಯ್ಯತ್** ಆಗಿದೆ. ಎಂದರೆ ನಾವು ದುಆ ಮಾಡುವಾಗ ಅಲ್ಲಾಹನು ನಮಗೆ ದಯಪಾಲಿಸುತ್ತಾನೆ.

ಬೇಡುತ್ತಾ ಹೋದರೆ ಲಭಿಸುತ್ತಲೇ ಇರುವುದು ಎಂಬ ಪಾಠವನ್ನು ಎರಡನೇ ರೀತಿಯ ಕರುಣೆಯು ಕಲಿಸುತ್ತದೆ. ಬೇಡುವುದು ಮನುಷ್ಯನ ವಿಶೇಷತೆಯಾಗಿದೆ ಮತ್ತು ದುಆವನ್ನು ಅಂಗೀಕರಿಸುವುದು ಅಲ್ಲಾಹನ ವಿಶೇಷತೆಯಾಗಿದೆ. ಆದ್ದರಿಂದ ಅಲ್ಲಾಹನ ಅನುಗ್ರಹಗಳಿಗೆ ಮನ್ನಣೆ ನೀಡಬೇಕು ಮತ್ತು ಅದರಿಂದ ಪ್ರಯೋಜನ ಪಡೆಯಬೇಕು. ಪ್ರಕೃತಿ ನಿಯಮದಲ್ಲಿ ದುಆ ಸ್ವೀಕಾರದ ಉದಾಹರಣೆಗಳು ಇವೆ. ಪ್ರತಿಯೊಂದು ಕಾಲಘಟ್ಟದಲ್ಲಿ ಅಲ್ಲಾಹನು ಜೀವಂತ ಉದಾಹರಣೆಗಳನ್ನು ಕಳುಹಿಸುತ್ತಾನೆ. ಆದ್ದರಿಂದಲೇ ಅವನು **ಇಹ್ದಿನಸ್ಸಿರಾತಲ್ ಮುಸ್ತಖೀಂ** ಎಂಬ ದುಆವನ್ನು ಕಲಿಸಿದ್ದಾನೆ.

ದುಆಗೆ ಸಂಬಂಧಿಸಿ ನಮಾಝಿನ ಉದ್ದೇಶ ಮತ್ತು ಪ್ರಾಮುಖ್ಯತೆ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಮಾಝಿನ ಯಥಾರ್ಥ ಉದ್ದೇಶ ಮತ್ತು ಅದರ ತಿರುಳು ಪ್ರಾರ್ಥನೆಯೇ ಆಗಿದೆ. ದುಆ ಮಾಡುವುದು ಪ್ರಕೃತಿ ನಿಯಮಕ್ಕೆ ಅನುಸಾರವಾದ ಸಂಗತಿಯಾಗಿದೆ.

ಈ ಕೆಲವು ವಿಷಯಗಳನ್ನು ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ನೀಡಿರುವ ಮಹತ್ತಾದ ಖಜಾನೆಯಿಂದ ನಿಮ್ಮ ಮುಂದಿರಿಸಿದ್ದೇನೆ. ಅವುಗಳ ಪ್ರಕಾರ ನಡೆಯುವುದರಿಂದ ನಾವು ಅಲ್ಲಾಹನ ಅನುಗ್ರಹಗಳನ್ನು ಪಡೆಯುವವರಾಗಬಹುದು. ಪಾಕಿಸ್ತಾನ ಮತ್ತು ಅಲ್‌ಜೀರಿಯ ಸಮೇತ ಎಲ್ಲೆಲ್ಲ ಅಹ್ಮದಿಯರಿಗೆ ಕಷ್ಟತೆಗಳನ್ನು ಕೊಡಲಾಗುತ್ತದೋ ಅವರಿಗಾಗಿ ವಿಶೇಷವಾಗಿ ದುಆಗಳನ್ನು ಮಾಡಬೇಕು. ಇತರರಿಗೆ ದುಆಗಳನ್ನು ಮಾಡುವವರಿಗಾಗಿ ದೇವದೂತರು ದುಆಗಳನ್ನು ಮಾಡುತ್ತಾರೆ. ಒಟ್ಟಿನಲ್ಲಿ ಇದು ಲಾಭಕರವಾದ ವ್ಯಾಪಾರವಾಗಿದೆ. ಆದ್ದರಿಂದ ಈ ವಿಧಾನವನ್ನು ಸದಾ ನೆನಪಿಲ್ಲಿಡಬೇಕು. ಅಲ್ಲಾಹನು ನಮಗೆ ವಿಶೇಷವಾಗಿ ಈ ರಮಝಾನಿನಲ್ಲಿ ಈ ಮಾರ್ಗದ ಪ್ರಕಾರ ನಡೆಯಲು ಸೌಭಾಗ್ಯ ನೀಡಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ـ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 16-04-2021*

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim |***Layout:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at:** www.alislam.org/friday-sermon